**<u>ದಿನಾಂಕಃ 09-09-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ವಾದಿ ಪರ ಶ್ರೀ ಎನ್.ಎಸ್.ಬಿ. ವಕೀಲರಿಂದಃ</u>**

ನನ್ನ ತಂದೆಯ ಹೆಸರು ಹುಚ್ಚಪ್ಪ ಮುರಿಗೆಪ್ಪ ಶೆಟ್ಟರ ಎಂದರೆ ಸರಿ. ನನ್ನ ತಾಯಿಯ ಹೆಸರು ಚೆನ್ನಮ್ಮ ಎಂದರೆ ಸರಿ. ನಮ್ಮ ತಂದೆ-ತಾಯಿಗೆ 1) ಶಶಿಕಲಾ, 2) ಸೂರ್ಯಕಲಾ, 3) ಮುರಿಗೆಪ್ಪ ಎಂದರೆ ನಾನು ಹಾಗೂ 4) ಜಯದೇವಪ್ಪ ಎಂದು ಮಕ್ಕಳು ಎಂದರೆ ಸರಿ. ನನ್ನ ತಂದೆ ದಿನಾಂಕ 23.02.2011 ರಂದು ತೀರಿಕೊಂಡಿರುತ್ತಾರೆ ಎಂದರೆ ಸರಿ. ಅದೇರೀತಿ ನನ್ನ ತಾಯಿ 1997 ನೇ ಸಾಲಿನಲ್ಲಿ ತೀರಿಕೊಂಡಿರುತ್ತಾರೆ ಎಂದರೆ ಸರಿ. ನನ್ನ ತಂದೆ-ತಾಯಿಗೆ ನಾವು 4 ಜನ ಮಾತ್ರ ವಾರಸುದಾರರು ಎಂದರೆ ಸರಿ. 1966 ನೇ ಸಾಲಿನಲ್ಲಿ ನನ್ನ ತಂದೆ ಹಾಗೂ ನನ್ನ ತಂದೆಯ ಸಹೋದರರಲ್ಲಿ ಆದ ಹಿಸ್ಸೆಯಲ್ಲಿ ದಾವಾ ಸ್ವತ್ತುಗಳು ನನ್ನ ತಂದೆಯ ಪಾಲಿಗೆ ಬಂದಂತಹ ಸ್ವತ್ತುಗಳು ಎಂದರೆ ಸಾಕ್ಷಿ ಸದರಿ ಹಿಸ್ಸೆ ಆದದ್ದು ನಿಜ ಆದರೆ ನನ ್ನಅಜ್ಜನಿಂದ ನೇರವಾಗಿ ದಾವಾ ಸ್ವತ್ತುಗಳು ನನಗೆ ಹಾಗೂ ನನ್ನ ಸಹೋದರನ ಹೆಸರಿಗೆ ಬಂದಿರುತ್ತವೆ ಎನುತ್ತಾರೆ. ದಾವಾ ಸ್ವತ್ತುಗಳು ನಮ್ಮ ಸ್ವಯಾರ್ಜಿತ ಆಸ್ತಿಗಳು ಅಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ದಾವಾ ಸ್ವತ್ತುಗಳು ನಮ್ಮ ಪಿತ್ರಾರ್ಜಿತ ಆಸ್ತಿಗಳು ಎನ್ನುತ್ತಾರೆ.

02. ದಾವಾ ಸ್ವತ್ತುಗಳಲ್ಲಿ ನಮ್ಮ ಹಾಗೂ ನಮ್ಮ ಸಹೋದರ ಮತ್ತು ಸಹೋದರಿಯರಲ್ಲಿ ಹಿಸ್ಸೆ ಆಗಿಲ್ಲ ಎಂದರೆ ಸರಿ. ನಮ್ಮ ಮನೆತನದ ವ್ಯವಹಾರವನ್ನು ನನ್ನ ತಂದೆಯವರೇ ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ಅದೇರೀತಿ ನಮ್ಮ ಮನೆತನದ ಜಮೀನುಗಳ ವ್ಯವಹಾರವನ್ನು ಸಹ ನನ್ನ ತಂದೆಯೇ ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ದಾವಾ ಆಸ್ತಿಗಳ ಕಂದಾಯ ದಾಖಲೆಗಳಲ್ಲಿ ನಮ್ಮ ಹೆಸರುಗಳನ್ನು ವರದಿ ಮೂಲಕ ದಾಖಲಿಸುವ ಕಾಲಕ್ಕೆ ನನ್ನ ಸಹೋದರಿಯರಿಗೆ ನೋಟಿಸ್ಸು ನೀಡಿಲ್ಲ ಎಂದರೆ ಸರಿ. ಅದೇರೀತಿ ನನ್ನ ಸಹೋದರಿಯರು ದಾವಾ ಸ್ವತ್ತುಗಳಲ್ಲಿ ತಮ್ಮ ಹಕ್ಕನ್ನು ಬಿಟ್ಟು ಕೊಟ್ಟ ಬಗ್ಗೆ ನನ್ನ ಬಳಿ ಯಾವುದೇ ದಾಖಲೆ ಇಲ್ಲ ಎಂದರೆ ಸರಿ. ದಾವಾ ಸ್ವತ್ತುಗಳ

ಕಂದಾಯ ದಾಖಲಗಳಿಗೆ ನಾನು ವಾದಿಯರ ಗಮನಕ್ಕೆ ಬಾರದೇ ಕಂದಾಯ ಅಧಿಕಾರಿಗಳೊಂದಿಗೆ ಮಿಲಾಪೆಯಾಗಿ ಕಾನೂನುಬಾಹಿರವಾಗಿ ನಮ್ಮ ಹೆಸರನ್ನು ದಾಖಲಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳ ದಾಖಲೆಗಳಿಗೆ ನಮ್ಮ ಹೆಸರನ್ನು ಖೊಟ್ಟಿ ರೀತಿಯಿಂದ ದಾಖಲಿಸಿಕೊಂಡಿದ್ದರಿಂದ ಸದರಿ ದಾಖಲೆಗಳು ಖೊಟ್ಟಿ ದಾಖಲೆಗಳು ಎಂದರೆ ಸರಿಯಲ್ಲ.

03. ನನ್ನ ತಂದೆ ಪೌತಿಯಾದ ನಂತರ ನಮ್ಮ ಮನೆತನದ ವ್ಯವಹಾರವನ್ನು ನಾನೇ ಮಾಡುತ್ತಾ ಬಂದಿರುತ್ತೇನೆ ಎಂದರೆ ಸರಿ. ದಾವಾ ಸ್ವತ್ತುಗಳಲ್ಲಿ ನನ್ನ ತಂದೆಯ ಸಹೋದರರದ್ದು ಯಾವುದೇ ಹಕ್ಕು ಇಲ್ಲ ಎಂದರೆ ಸರಿ. ಸದರಿ ನನ್ನ ತಂದೆಯ ಸಹೋದರರು ಅವರ ಹಿಸ್ಸೆಗೆ ಬಂದ ಜಮೀನುಗಳನ್ನು ಅವರೇ ಪ್ರತ್ಯೇಕವಾಗಿ ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸರಿ. ಹಾಗೂ ಸದರಿಯವರು ಪ್ರತ್ಯೇಕವಾಗಿ ವಾಸವಾಗಿದ್ದಾರೆ ಎಂದರೆ ಸರಿ. ದಾವಾ ಸ್ವತ್ತುಗಳಲ್ಲಿ ನಾನು ಖರೀದಿಸಿದ ಯಾವುದೇ ಆಸ್ತಿ ಇಲ್ಲ ಎಂದರೆ ಸರಿ. ಅದೇರೀತಿ ನನ್ನ ದಾವಾ ಸ್ವತ್ತುಗಳಲ್ಲಿ 2ನೇ ಪ್ರತಿವಾದಿ ಖರೀದಿಸಿದ ಯಾವುದೇ ಆಸ್ತಿ ಇಲ್ಲ ಎಂದರೆ ಸರಿ. ದಾವಾ ಸ್ವತ್ತುಗಳು ನಮ್ಮ ಹಾಗೂ ನಮ್ಮ ಸಹೋದರಿಯರ ಅಂದರೆ ವಾದಿಯರ ಜಂಟಿ ಕಬ್ಜಾ ವಹಿವಾಟಿಯಲ್ಲಿರು ವ ಆಸ್ತಿಗಳು ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ನಮ್ಮ ಹಾಗೂ ನಮ್ಮ ಸಹೋದರಿಯರ ಅಂದರೆ ವಾದಿಯರ ಜಂಟಿ ಕಬ್ಜಾ ವಹಿವಾಟಿಯಲ್ಲಿವೆ ಎಂದು ಗೊತ್ತಿದ್ದರೂ ಸಹ ಇಲ್ಲ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳನ್ನು ಬಿಟ್ಟು ನಮ್ಮ ಕುಟುಂಬಕ್ಕೆ ಬೇರೆ ಸ್ವತ್ತುಗಳು ಇಲ್ಲ ಎಂದರೆ ಸರಿ.

04. ವಾದಿಯರಿಗೆ ಬೆಳ್ಳಿ, ಬಂಗಾರ, ಬಾಂಡೆ ಸಾಮಾನುಗಳನ್ನು ಸಾಕಷ್ಟು ಕೊಟ್ಟಿರುತ್ತೇವೆ ಎಂದು ನನ್ನ ಪ್ರಮಾಣ ಪತ್ರದಲ್ಲಿ ಬರೆಯಿಸಿದ್ದು ಆ ಬಗ್ಗ ದಾಖಲೆಗಳು ಇಲ್ಲ. ವಾದಿಯರಿಗೆ ಯಾವುದೇ ಬೆಳ್ಳಿ, ಬಂಗಾರ, ಬಾಂಡೆ ಸಾಮಾನುಗಳನ್ನು ನೀಡದೇ ಇದ್ದರೂ ಸಹ ಸಾಕಷ್ಟು ನೀಡಿರುತ್ತೇವೆ ಎಂದು ನನ್ನ ಪ್ರಮಾಣ ಪತ್ರದಲ್ಲಿ ಸುಳ್ಳು ಬರೆಯಿಸಿರುತ್ತೇನೆ ಎಂದರೆ ಸರಿಯಲ್ಲ. ವಾದಿಯರಿಗೆ ಸಂಬಂಧಿಸಿದಂ ನಿಡಿ-1 ಮತ್ತು 2 ಶಾಲಾ ದಾಖಲಾತಿಗಳನ್ನು ಬಿಟ್ಟು ನಾವು ಬೇರೆ ಯಾವುದೇ ದಾಖಲೆಯನ್ನು ಹಾಜರು

ಪಡಿಸಿಲ್ಲ ಎಂದರೆ ಸರಿ. ಆದ್ದರಿಂದ ವಾದಿಯರಿಗೆ ದಾವಾ ಸ್ವತ್ತುಗಳಲ್ಲಿ ತಲಾ ¼ ಹಿಸ್ಸೆ ಇದೆ ಎಂದರೆ ಸರಿಯಲ್ಲ. ಅದೇರೀತಿ ನನಗೆ ಹಾಗೂ 2 ನೇ ಪ್ರತಿವಾದಿಗೆ ತಲಾ ¼ ಹಿಸ್ಸೆ ಇದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನಗೆ ಹಗೂ 2 ನೇ ಪ್ರತಿವಾದಿಗೆ ಮಾತ್ರ ದಾವಾ ಸ್ವತ್ತಗಳಲ್ಲಿ ಮಾತ್ರ ಹಕ್ಕು ಇದೆ ಎನ್ನುತ್ತಾರೆ. ನನಗೆ ಹಾಗೂ 2 ನೇ ಪ್ರತಿವಾದಿಗೆ ಮಾತ್ರ ದಾವಾ ಸ್ವತ್ತಗಳಲ್ಲಿ ಹಕ್ಕು ಇದೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಮುಂದೂಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).**

ಓ.ಹೇ.ಕೆ.ಸರಿ ಇದೆ.

**Sd/-**

ಹಿರಿಯ ದಿವಾಣಿ ನ್ಯಾಯಾಧೀಶರು

ಹಾಗೂ ಜೆ.ಎಂ.ಎಫ್.ಸಿ., ನ್ಯಾಯಾಲಯ ಬ್ಯಾಡಗಿ.